**ದಿನಾಂಕಃ 07.07.2022 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ-ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ-**

ನಿಪಿ-31 ಕ್ಕೆ ನನ್ನ ಸಮಕ್ಷಮ ಯಾರೂ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-31 ಕ್ಕೆ ನನ್ನ ಸಮಕ್ಷಮ ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಇವರು ಸಹಿ ಮಾಡಿದ್ದರೂ ಸಹ ಪ್ರತಿವಾದಿ 3 ರವರ ಮಾತು ಕೇಳಿ, ನನ್ನ ಸಮಕ್ಷಮ ಸಹಿ ಮಾಡಿರುವುದು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಪಿ-31 ರ ಸಾಕ್ಷಿಗಳ ಸಮಕ್ಷಮ 1 ರಿಂದ 3 ನೇ ಪ್ರತಿವಾದಿಯರು ವಾದಿಯ ಕಡೆಯಿಂದ ನನ್ನ ಸಮಕ್ಷಮ ಕ್ರಯದ ಕರಾರು ಹಣವನ್ನು ಪಡೆದುಕೊಂಡಿರುವುದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-31 ಕ್ಕೆ ಸಹಿ ಹಾಕಿದ ನಂತರ ಸಾಕ್ಷಿದಾರರಾಗಿ ಜಿ. ಕರಿಯಣ್ಣ ಎನ್ನುವವರೂ ಸಹ ಸಹಿ ಮಾಡಿರುವುದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಿ. ಕರಿಯಣ್ಣ ಇವರು ನಮ್ಮ ಹರಿಯಬ್ಬೆ ಗ್ರಾಮದವರು. ಸದರಿ ಜಿ. ಕರಿಯಣ್ಣನವರು ಈಗ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡು ಸುಮಾರು 2-3 ವರ್ಷಗಳಾಗಿರಬಹುದು.

3. ನಿಪಿ-31 ನ್ನು ಬರೆಯುವಾಗ ಪ್ರತಿವಾದಿ 1 ರಿಂದ 3 ರವರು ಹಾಜರಿದ್ದರೂ ಸಹ ಹಾಜರಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ರಿಂದ 3 ನೇ ಪ್ರತಿವಾದಿಯರ ವಕೀಲರಿಂದ ಈ ಪ್ರಕರಣದಲ್ಲಿ ಹೇಗೆ ಸಾಕ್ಷಿ ಹೇಳಬೇಕೆಂದು ಸಲಹೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-31 ರ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಮತ್ತು ನನ್ನ ಸಮಕ್ಷಮ ನಡೆದಿದ್ದರೂ ಸಹ 3 ನೇ ಪ್ರತಿವಾದಿಗೆ ಅನುಕೂಲವಾಗಲೆಂದು 3 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-31 ನ್ನು ನಾನು

ಬೆಂಗಳೂರಿನಲ್ಲಿ ಬರೆದಿದ್ದರೂ ಸಹ ನಮ್ಮ ಊರು ಹರಿಯಬ್ಬೆಯಲ್ಲಿ ಬರೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ಮತ್ತು 3 ನೇ ಪ್ರತಿವಾದಿ ಪರ ವಕೀಲರು ಪಾಟೀ–ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಒಪ್ಪಿಕೊಂಡ ಅಂಶಗಳಿಗೆ ಮಾತ್ರ ಪಾಟೀ–ಸವಾಲನ್ನು ಮಾಡಲು ಪ್ರತಿವಾದಿ ಪರ ವಕೀಲರು ಅವಕಾಶವನ್ನು ಹೊಂದಿರುತ್ತಾರೆ. ಆದ್ದರಿಂದ ಪಾಟೀ–ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.